


# 38ರ ಸಂಭ್ರಮದಲ್ಲಿ ಪಾಂಡ!



ಚೀನಾದ ಹಾಂಕಾಂಗ್ ಓಷನ್ ಪಾರ್ಕ್‌ನಲ್ಲಿರುವ ಹೆಣ್ಣು ಪಾಂಡ 37ನೇ ವಸಂತ ಪೂರೈಸಿ 38ಕ್ಕೆ ಕಾಲಿಟ್ಟಿದೆ. ಇದರ ಹೆಸರು ಜಿಯ ಜಿಯ. 'ಮೃಗಾಲಯದಲ್ಲಿ ದೀರ್ಘ ಕಾಲ ಬಂಧನದಲ್ಲಿದ್ದ ಹಾಗೂ ಅತ್ಯಂತ ಹೆಚ್ಚು ವರ್ಷಗಳ ಕಾಲ ಬದುಕಿದ ಪಾಂಡ' ಎನ್ನುವ ಗಿನ್ನಿಸ್ ದಾಖಲೆ ಈ ಪಾಂಡ ಹೆಸರಲ್ಲಿದೆ. ಜಿಯ ಜಿಯ ಹುಟ್ಟಿದ್ದು 1978ರಲ್ಲಿ, 1999ರ ಮಾರ್ಚ್‌ನಲ್ಲಿ ಇದನ್ನು ಹಾಂಕಾಂಗ್ ಪಾರ್ಕ್‌ಗೆ ಕರೆತರಲಾಯಿತು.

ಸಾಮಾನ್ಯವಾಗಿ ಪಾಂಡಗಳ ಜೀವಿತಾವಧಿ 18ರಿಂದ 20 ವರ್ಷ. ಮೃಗಾಲಯದಲ್ಲಿಟ್ಟು ಪೋಷಿಸಿದರೆ ಹೆಚ್ಚೆಂದರೆ 30 ವರ್ಷ ಬದುಕಬಹುದು. ಜಿಯಗೂ ಮೊದಲು ಡುಡು ಎನ್ನುವ ಪಾಂಡ 36 ವರ್ಷಗಳ ಕಾಲ ಮೃಗಾಲಯದಲ್ಲಿ ಬದುಕಿತ್ತು. ಡುಡು ಸತ್ತ ಹದಿನೈದು ವರ್ಷಗಳ ನಂತರ ಈಗ ಜಿಯ ದಾಖಲೆ ನಿರ್ಮಿಸಿದೆ.

'ಮಾನವರ ಪೋಷಣೆಯಲ್ಲಿ ದೀರ್ಘ ಕಾಲ ಬದುಕಿದ ಪಾಂಡ ಜಿಯ ಇಂದು ಗಿನ್ನಿಸ್ ವಿಶ್ವ ದಾಖಲೆಗೆ ಸೇರಿದೆ. 16 ವರ್ಷಗಳ ಕಾಲ ಈ ಪಾಂಡವನ್ನು ಸಲಹಿದ್ದಕ್ಕೆ ಓಷನ್ ಪಾರ್ಕ್‌ನ ಸಿಬ್ಬಂದಿಗೆ ಅಭಿನಂದನೆ' ಎಂದು ಗಿನ್ನಿಸ್ ವಿಶ್ವ ದಾಖಲೆ ಸಂಸ್ಥೆಯ ತೀರ್ಪುಗಾರರಾದ ಬ್ಲಿಥ್ ಪಿಟ್ಜ್ ವಿಲಿಯಂ ಹೇಳಿದ್ದಾರೆ.

ಓಷನ್ ಪಾರ್ಕ್‌ನ ಕಾರ್ಯಕಾರಿ ನಿರ್ದೇಶಕ 'ಜಿಯ ಈಗಲೂ ಆರೋಗ್ಯದಿಂದಿದೆ. ಇಳಿವಯಸ್ಸಿನ ಕಾರಣ ಅದರ ಕಣ್ಣು ಮಂದವಾಗಿದೆ. ಆದರೆ ಅದನ್ನು ಪೋಷಿಸುವವರನ್ನು ಅದು ಗುರುತಿಸುತ್ತದೆ' ಎಂದಿದ್ದಾರೆ.

ದಕ್ಷಿಣ ಮತ್ತು ಪೂರ್ವ ಚೀನಾದಲ್ಲಿ ಹಿಂದೆ ಸಾಕಷ್ಟು ಪಾಂಡಗಳಿದ್ದವು. ಮ್ಯಾನ್ಮಾರ್ ಮತ್ತು ವಿಯೆಟ್ನಾಮ್ ಗಳಲ್ಲೂ ಕಾಣಬಹುದಿತ್ತು. ಆದರೆ ಈಗ ಪಾಂಡ ಅಳಿವಿನಂಚಿನ ಪ್ರಾಣಿಗಳ ಪಟ್ಟಿಗೆ ಸೇರಿದೆ.

■ ನಿಸರ್ಗ